# ಹೊಳಪು

Version 2.0




Shri Vidyavardhaka Higher Secondary School, Miyapadavu
Miyapadavu Post, Pin 671323

ಪುಣ್ಯಸ್ಮರಣೆ



ತೊಟ್ಟೆತ್ತೋಡಿ ನಾರಾಯಣ ಭಟ್ಟರು
ಶಾಲಾ ಸಂಸ್ಥಾಪಕರು

ಜನನ : 22–4–1904 ಮರಣ : 16–3–1975

# ಪುಣ್ಯಸ್ಮರಣೆ



**ತೊಟ್ಟೆತ್ತೋಡಿ ಕೇಶವ ಭಟ್ಟರು**

ಶಾಲಾ ಸಂಸ್ಥಾಪಕರು

(ಟಿ. ನಾರಾಯಣ ಭಟ್ಟರ ಸುಪುತ್ರ)

## ಶಾಲಾ ಸಂಚಾಲಕರು



ಶ್ರೀಮತಿ ಟಿ. ಪ್ರೇಮಾ ಕೆ. ಭಟ್

**ಎಸ್. ಗೋಪಾಲಕೃಷ್ಣ ಭಟ್**
ಮುಖ್ಯೋಪಾಧ್ಯಾಯರು



## ಸಂದೇಶ

ಗ್ರಾಮೀಣ ಪ್ರದೇಶವಾದ ಮೀಯಪದವಿಗೆ ಪ್ರೌಢಶಿಕ್ಷಣ ಅವಕಾಶವನ್ನು ತೆರೆದಿಟ್ಟ ಶ್ರೀ ವಿದ್ಯಾವರ್ಧಕ ಹೈಯರ್ ಸೆಕೆಂಡರಿ ಶಾಲೆ ಐದು ದಶಕಗಳನ್ನು ಪೂರೈಸಿ ಹೆಮ್ಮರವಾಗಿ ನಿಂತಿದೆ. ಇದು ಬಹುಜನರಿಗೆ ಜ್ಞಾನದ ಬೆಳಕನ್ನು ನೀಡಿದೆ, ಬದುಕಿಗೆ ನೆರಳನ್ನು ನೀಡಿದೆ. ವಿಪುಲ ಧ್ಯೇಯಾಕಾಂಕ್ಷೆಯನ್ನು ಹೊಂದಿರುವ ಈ ವಿದ್ಯಾಸಂಸ್ಥೆ ಪುರೋಗತಿಯ ಹಾದಿಯನ್ನು ಕ್ರಮಿಸುತ್ತಿದೆ.

ಉತ್ಸಾಹಿ ಹಳೆವಿದ್ಯಾರ್ಥಿಗಳು, ಆತ್ಮೀಯ ಹಿತೈಷಿಗಳು, ಕ್ರಿಯಾಶೀಲ ಸಂಚಾಲಕರು, ಚುರುಕಾದ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗಳು, ವಿಶ್ವಾಸಿ ವಿದ್ಯಾರ್ಥಿ-ರಕ್ಷಕರು ಮುಂತಾದ ಎಲ್ಲರ ಸಹಕಾರದಿಂದ ಸದ್ರಿ ಸಂಸ್ಥೆಯ ಸುವರ್ಣ ಮಹೋತ್ಸವ ಸಂಪನ್ನಗೊಳ್ಳುತ್ತಿದೆ. ಇದು ಮೀಯಪದವಿನ ಪಾಲಿನ ಸುವರ್ಣ ದಿನಗಳಾಗಲಿ. ಶೈಕ್ಷಣಿಕ ಮತ್ತು ಸಾಮಾಜಿಕ ಪುರೋಗತಿಗೆ ಈ ಕಾರ್ಯಕ್ರಮ ಪೂರಕವಾಗಲಿ ಎಂಬ ಸದಾಶಯ ನನ್ನದು. ಈ ಕಾರ್ಯಕ್ರಮಕ್ಕೆ ಸಕಲ ಸಹಕಾರ ಹಾಗೂ ಮಾರ್ಗದರ್ಶನ ನೀಡಿದ ಎಲ್ಲಾ ಬಂಧು ಭಗಿನಿಯರಿಗೂ ಅಂತರಾಳದ ಕೃತಜ್ಞತೆಗಳು.

**ಎಸ್. ಗೋಪಾಲಕೃಷ್ಣ ಭಟ್**
ಮುಖ್ಯೋಪಾಧ್ಯಾಯರು

# ಶಾಲಾ ಚರಿತ್ರೆ

*ಮೀಂಜ ಪಂಚಾಯಿತಿನ ಮೀಯಪದವು ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳು ಶೈಕ್ಷಣಿಕವಾಗಿ ಬಹಳ ಹಿಂದುಳಿದ ಪ್ರದೇಶವಾಗಿತ್ತು. ಈ ಪಂಚಾಯಿತಿನಲ್ಲಿ 1966 ರ ವರೆಗೆ ಪ್ರೌಢ ವಿದ್ಯಾಭ್ಯಾಸವನ್ನು ನೀಡುವ ಒಂದೇ ಒಂದು ಸಂಸ್ಥೆಯು ಅಸ್ತಿತ್ವದಲ್ಲಿರಲಿಲ್ಲ. ಪ್ರೌಢ ವಿದ್ಯಾಭ್ಯಾಸ ವೆಂಬುದು ಈ ಪ್ರದೇಶದ ಜನರಿಗೆ ಗಗನಕುಸುಮ.1965 ರಲ್ಲಿ ಶ್ರೀಯುತ ಎಂ ರಾಮಕೃಷ್ಣರಾಯರ ಪ್ರಯತ್ನದಿಂದ ಈ ಊರ ಕೆಲವು ವಿದ್ಯಾಭಿಮಾನಿಗಳು ಒಟ್ಟು ಸೇರಿ ದಿ. ತೊಟ್ಟೆತ್ತೋಡಿ ನಾರಾಯಣ ಭಟ್ಟರ ಹಾಗೂ ಅವರ ಪುತ್ರ ದಿ. ಟಿ .ಎಂ. ಕೇಶವ ಭಟ್ಟರ ಮುಂದಾಳುತನದಲ್ಲಿ ಶ್ರೀ ವಿದ್ಯಾವರ್ಧಕ ಸಂಘ, ಮೀಯಪದವು (ರಿ) ಸ್ಥಾಪಿಸಲ್ಪಟ್ಟಿತು. ಸಂಘಕ್ಕೆ ಅದರದ್ದೇ ಆದ ಸ್ಥಳವಿಲ್ಲದ ಸಮಸ್ಯೆಯು ಈ ಸಂದರ್ಭದಲ್ಲಿ ದರ್ಬೆ ದಿ ಕಾಂತಪ್ಪ ಚೌಟರು ಮತ್ತು ನಾರಾಯಣ ಚೌಟರು ಮೀಯಪದವಿನಲ್ಲಿ ತಮ್ಮ ಹೆಸರಲ್ಲಿದ್ದ ಸ್ಥಳವನ್ನು ಸಂಘಕ್ಕೆ ದಾನ ಮಾಡುವುದರ ಮೂಲಕ ಹೈಸ್ಕೂಲಿನ ಸ್ಥಾಪನೆಗೆ ಅರ್ಜಿ ಸಲ್ಲಿಸುವಲ್ಲಿ ನೆರವಾದರು. ಉಳಿದ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿ ವಿದ್ಯಾ ಇಲಾಖೆಯ ಮೂಲಕ ಸರಕಾರಕ್ಕೆ ಅರ್ಜಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸರಕಾರದಿಂದ ಮಂಜೂರಾತಿಯನ್ನು ಪಡೆಯಲು ಪ್ರಸಿದ್ಧ ನ್ಯಾಯವಾದಿಗಳಾದ ಕಳ್ಳಿಗೆ ಮಹಾಬಲ ಭಂಡಾರಿಯವರು ಮತ್ತು ಉಜಿರೆ ಈಶ್ವರ ಭಟ್ಟರು ಸಹಕರಿಸಿದರು. ಇವರೆಲ್ಲರ ಪ್ರಯತ್ನದಿಂದ ಸಂಘವು 1966 ರಲ್ಲಿ ಹೈಸ್ಕೂಲನ್ನು ಪ್ರಾರಂಭಿಸಲು ಮಂಜೂರಾತಿಯನ್ನು ಪಡೆಯಿತು.*

*ಇದರಂತೆ 1966 ಜೂನ್ ಒಂದನೇ ತಾರೀಕಿನಂದು _ಶ್ರೀ ವಿದ್ಯಾವರ್ಧಕ ಹೈಸ್ಕೂಲ್ ಮಿಯಪದವು _ಶ್ರೀ ಮಾಧವರಾವ್ ಅಡ್ವಕೇಟ್ ಕಾಸರಗೋಡು ಇವರ ಅಧ್ಯಕ್ಷತೆಯಲ್ಲಿ_ ಶ್ರೀ ದಿ.ಕಳ್ಳಿಗೆ ಮಹಾಬಲ ಭಂಡಾರಿ ಯವರಿಂದ ಉದ್ಘಾಟಿಸಲ್ಪಟ್ಟಿತು. ಎರಡು ಕೋಣೆಗಳಿದ್ದ ಕಟ್ಟಡದಲ್ಲಿ ಎಂಟನೇ ತರಗತಿಯು ಆರಂಭವಾಯಿತು. ಆರಂಭದಲ್ಲಿದ್ದ ಮಕ್ಕಳ ಸಂಖ್ಯೆ 46. ದಿ ಕೃಷ್ಣರಾವ್ ಇವರು ಪ್ರಥಮ ಮುಖ್ಯೋಪಾಧ್ಯಾಯರಾಗಿ ಅಧಿಕಾರ ಸ್ವೀಕರಿಸಿದರು. 1968 ರಲ್ಲಿ ಶಾಲೆಯುಪರಿಪೂರ್ಣ ಹೈಸ್ಕೂಲ್ ಆಗಿ ಮಾನ್ಯತೆ ಪಡೆಯಿತು. 1969 ಮಾರ್ಚ್ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತಮ ಫಲಿತಾಂಶದೊಂದಿಗೆ ತೇರ್ಗಡೆಯಾದರು.ಅನಂತರ ಪ್ರತಿ ವರ್ಷ ಶಾಲೆಯು ಉತ್ತಮ ಫಲಿತಾಂಶವನ್ನು ಸತತವಾಗಿ ಪಡೆಯುತ್ತಿದೆ. ಈ ಮಧ್ಯೆ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ನಾರಾಯಣ ಭಟ್ಟರು ಸ್ವರ್ಗಸ್ಥರಾದುದರಿಂದ ಅವರ ಸೊಸೆಯಾದ ಶ್ರೀಮತಿ ಪ್ರೇಮ .ಕೆ . ಭಟ್ ತೊಟ್ಟೆತ್ತೋಡಿ. ಇವರು ಶಾಲಾ ಪ್ರಬಂಧಕರಾಗಿ ಅಧಿಕಾರ ಸ್ವೀಕರಿಸಿದ್ದು ಈಗಲೂ ಮುಂದುವರಿದಿರುವರು.*

*2010 ರಲ್ಲಿ ವಿದ್ಯಾಭ್ಯಾಸ ಇಲಾಖೆಯ ಮೂಲಕ ಕೇರಳ ಸರಕಾರದ ಮಂಜೂರಾತಿಯನ್ನು ಪಡೆದು ಈ ಶಾಲೆಯು ಹಿರಿಯ ಮಾಧ್ಯಮಿಕ ಶಾಲೆಯಾಗಿ ಭಡ್ತಿ ಗೊಂಡಿತು. ಇದೀಗ ವಿಶಾಲವಾದ ಆಟದ ಮೈದಾನ ಕಂಪ್ಯೂಟರ್ ಲಾಬ್ ವಿಶಾಲವಾದ ವಾಚನಾಲಯ ಗ್ರಂಥಭಂಡಾರ ಬಯಲು ರಂಗಮಂದಿರ ಮೊದಲಾದವುಗಳಿಂದ ಕೂಡಿದ್ದುನೂರಾರು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವನ್ನು ಮಾತ್ರ ನೀಡುವುದಲ್ಲದೆಚಿತ್ರ _ಸಂಗೀತ_ ಸಾಹಿತ್ಯ _ಶಾರೀರಿಕ _ಶಿಕ್ಷಣ_ ಕ್ರೀಡೆ ಮುಂತಾದ ಚಟುವಟಿಕೆಗಳಿಗೂ ಹೆಚ್ಚಿನ ಗಮನವನ್ನಿಟ್ಟು, ವಿದ್ಯಾರ್ಥಿಗಳ ಪ್ರತಿಭಾ ಪೋಷಣೆಗೆ ಸಹಕಾರವಾಗುವ ಕಲೋತ್ಸವ, ವಿಜ್ಞಾನ ಮೇಳ, ಗಣಿತ ಮೇಳ ಸಮಾಜ ವಿಜ್ಞಾನ ಮೇಳ ಐಟಿಮೇಳ ,ಕರಕುಶಲ ಮೇಳ ಗಳಿಗೂ ಸರ್ವವಿಧದ ಪ್ರೋತ್ಸಾಹವನ್ನಿತ್ತು ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಬೆಳೆಸುವಲ್ಲಿ ಶಿಕ್ಷಣ ಸಂಸ್ಥೆಯೊಂದಿಗೆ ಅಧ್ಯಾಪಕರು ಕೈ ಜೋಡಿಸಿರುತ್ತಾರೆ.*

# ವಿದ್ಯಾಭ್ಯಾಸದ ಗುರಿ

‘ವಿದ್ಯಾಧನಂ ಸರ್ವಧನೇಷು ಪ್ರೂಜ್ಯಂ’ ಎಂಬಂತೆ ಶ್ರೀಯುತ ಎಚ್. ಎಸ್. ಕೆ. ವಿಶ್ವೇಶರವಯ್ಯನವರು ತಮ್ಮ 'ಪ್ರಬಂಧ ಮಂಜರಿ' ಎಂಬ ಸಂಕಲನದಲ್ಲಿ ಸುಮಾರು 37 ಪ್ರಬಂಧಗಳನ್ನು ಬರೆದಿದ್ದಾರೆ. ಎಚ್. ಕೆ. ವಿಶ್ವೇಶ್ವರಯ್ಯನವರು ಬಿ.ಎ, ಬಿ.ಇಡಿ., ಮಾಡಿ ನಿವೃತ ಶಿಕ್ಷಕರಾಗಿದ್ದಾರೆ. ಸುವರ್ಣ ಕರ್ನಾಟಕ, ಮೊಬೈಲ್ ಫೋನ್, ಭಯೋತ್ಪಾದನೆ, ಫ್ಯಾಷನ್ ಹೀಗೆ ಸುಮಾರು ಪ್ರಬಂಧಗಳು ಈ ಪುಸ್ತಕದಲ್ಲಿದೆ. ಇದರಲ್ಲಿರುವ ವಿಧ್ಯಾಭ್ಯಾಸದ ಗುರಿ ಎಂಬ ಪ್ರಬಂಧವು ನನಗೆ ಬಹಳ ಇಷ್ಟವಾಯಿತು.

ಪ್ರಾರಂಭದಲ್ಲಿ ವಿದ್ಯಾ ಎಂಬುದು ಜ್ಞಾನ ಸಂಪಾದನೆಗೆ ಸೀಮಿತವಾಗಿತ್ತು. ಅನಂತರ ವಿದ್ಯ ಪರಿಬಾಷೆ ವಿಸ್ತಾರವಾಗುತ್ತ ಇಂದು ವಿದ್ಯೆ "ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ದಿ" ಎಂದು ವ್ಯಾಖ್ಯಾನಗೊಳ್ಳುತ್ತಿದೆ. ವಿದ್ ಎಂದರೆ ಜ್ಞಾನ . ಅದರ ಅಭ್ಯಸ ಮಾಡುವುದೇ ವಿದ್ಯಾಭ್ಯಾ ಪ್ರರಾಂಭದಲ್ಲಿದ್ದ ವಿದ್ಯೆಯ ಪರಿಬಾಷೆ ವಿಸ್ತಾರಗೊಂಡಂತೆ ಅದರ ಗುರಿಯು ಹಿಗ್ಗುತ್ತಾ ಸಾಗಿದೆ. ಏನೇ ಆದರು ಜ್ಞಾನ ಎಂಬುದು ಶಕ್ತಿಯಾಗಿಯೇ ಉಳಿದಿದೆ. ಆದುದರಿಂದ ಪ್ರಪಂಚದಲ್ಲಿ ‘Knowledge is Power ’ಎಂದು ಪರಿಗಣಿಸಲ್ಪಟ್ಟಿದೆ. ಪುಷ್ಟಿಕರವಾದ ಆಹಾರ ದೇಹಕ್ಕೆ ಶಕ್ತಿ ನೀಡುವಂತೆ ಸಮೃದ್ಧವಾದ ಹಾಗು ಪ್ರಬುದ್ಧವಾದ ಜ್ಞಾನವು ಮಾನಸಿಕ ಶಕ್ತಿಗೆ ಕಾರಣವಾಗಿದೆ. ಇವೆರಡರ ಸಮತೋಲನವೇ ವಿದ್ಯಾಭ್ಯಾಸದ ಗುರಿಯಾಗಿದೆ.

# ಪ್ರಕೃತಿಯ ಕೊಡುಗೆ

ತಣ್ಣನೆಯ ಗಾಳಿ ಬೀಸುತಿದೆ
ಮನಕೆ ಹರುಷವ ತರುತಲಿದೆ
ಹೃದಯದ ದುಃಖ ಕಳೆಯುತಲಿ
ಸಂತಸದಬ್ಬರ ಹೆಚ್ಚುತಲಿ
ಗಗನದಿ ಹಾರುತಿದೆ ಹಕ್ಕಿ
ಹರಿಯುತಿದೆ ನದಿಯಲಿ ನೀರುಕ್ಕಿ
ನೀಲಾಕಾಶದ ಆ ಬಣ್ಣ
ನದಿಯ ನೀರಿಗೆ ಅದೆ ವರ್ಣ
ಪುಕೃತಿ ಎಂಬ ತಾಯಿಯ ಮಡಿಲಲ್ಲಿ
ಅಡಗಿವೆ ಹಲವು ಅದ್ಭುತವು
ಈ ತಾಯಿಯ ಅದ್ಭುತದ ಮುಂದೆ
ಜಗತ್ತನದ್ಭುತದ ಕಾಲ್ಕಸವು
ಪ್ರಕೃತಿ ಮಾತೆಯ ಸುಂದರ ದೃಶ್ಯ
ಸಾಲದು ನಾಲಿಗೆ ವರ್ಣಿಸಲು
ಮರುಜನ್ಮವ ನಾ ಪಡೆಯುವೆನು
ಅಂದದ ಚೆಲುವೆಯ ಬಣ್ಣಿಸಲು

# ನರಿ ಮತ್ತು ಡೋಲು

ನರಿಗಳು ಸಾಮಾನ್ಯವಾಗಿ ಸಂಕೋಚ ಸ್ವಭಾವದ ಗುಣವನ್ನು ಹೊಂದಿರುತ್ತವೆ. ಅದೇ ಸಮಯಕ್ಕೆ ಅವು ಹೇಡಿಗಳು ಕೂಡ. ಅವು ಸಣ್ಣ ವಸ್ತುಗಳನ್ನು ನೋಡಿಯು ಹೆದರುತ್ತವೆ. ಶಿಂಟುವು ಸಹ ಅದೇ ರೀತಿ ಭಯ ತುಂಬಿದ ಒಂದು ನರಿ. ಅದರ ಹೆಂಡತಿಯು ಕೂಡ ಬೇಸರಗೊಂಡು ಅದನ್ನು ಓಡಿಸಿಬಿಟ್ಟಿತು. ಪಾಪ ಶಿಂಟುವು ಮನೆಯನ್ನು ಕಳೆದುಕೊಂಡು ಅಲೆದಾಡುತ್ತಿತ್ತು.

ಶಿಂಟುವು ಎಲ್ಲಿಗೆ ಹೋಗುವುದೆಂದು ತಿಳಿಯದೆ ಕಾಡಿನಲ್ಲಿ ಅಲೆದಾಡುತ್ತಿತ್ತು. ಸಣ್ಣ ಸದ್ದು ಕೇಳಿದರೂ ಕೂಡ ಅತ್ಯಂತ ಭಯದಿಂದ ನಡುಗುತ್ತಿತ್ತು.

ಏನನ್ನು ಸರಿಯಾಗಿ ತಿನ್ನಲಾಗಲಿಲ್ಲ. ಮತ್ತು ಸರಿಯಾಗಿ ನಿದ್ದೆಯೂ ಮಾಡಲಿಲ್ಲ. ಕಾಡಿನ ಒಂದು ಭಾಗದಲ್ಲಿ ಆಗ ತಾನೇ ಯುದ್ಧ ನಡೆದಿದ್ದ ಸ್ಥಳಕ್ಕೆ ಅವನು ಬಂದನು.

ಇದ್ದಕ್ಕಿದ್ದಂತೆ ಒಂದು ವಿಚಿತ್ರವಾದ ಜೋರಾದ ಘರ್ಜನೆಯ ಶಬ್ದವನ್ನು ಕೇಳಿಸಿಕೊಂಡಿತು. ಅದು ಯಾವತ್ತು ಸಹ ಅಂತಹ ಶಬ್ದವನ್ನು ಕೇಳಿಸಿಕೊಂಡಿರಲಿಲ್ಲ. ಅದು ಹುಲಿ ಅಥವಾ ಸಿಂಹದ ಘರ್ಜನೆಯಂತಿರಲಿಲ್ಲ. ಅದು ಆನೆಯ ಘೀಳಿಡಪವಂತೆಯೂ ಇರಲಿಲ್ಲ.

ಅದು ನಾಯಿಯ ಬೊಗಳುವಿಕೆ ಯಂತೆ ಕೂಡ ಇರಲಿಲ್ಲ. ಶಿಂಟುವಿಗೆ ಬಹಳ ಭಯವಾಯಿತು. ಶಿಂಟು ಮನಸ್ಸಿನಲ್ಲಯೇ ಧೈರ್ಯ ತಂದುಕೊಂಡು, ಆ ಘರ್ಜನೆಯು ಕೇಳಿ ಬರುತ್ತಿರುವ ದಿಕ್ಕಿಗೆ ಮೆಲ್ಲನೆ ನಡೆದನು. ವಿಚಿತ್ರವಾದ ವಸ್ತುವೊಂದು ನೆಲದ ಮೇಲೆ ಬಿದ್ದಿರುವುದನ್ನು ಕಂಡನು. ಅದರ ಬಳಿ ಹೋಗಿ ಬಾಲವನ್ನಲ್ಲಾಡಿಸಿದನು. ಅದರ ಬಾಲವು ಅದಕ್ಕೆ ಸೋಕಿದಾಗ ಸುಮಧುರವಾದ ಶಬ್ಧವೊಂದು ಅದರಿಂದ ಬಂದಿತು. ಈಗ ಶಿಂಟುವಿನ ಧೈರ್ಯ ಹೆಚ್ಚಿ ಅದನ್ನು ತುಳಿದನು. ಶಬ್ದವು ಇನ್ನೂ ಹಚ್ಚಾಯಿತು. ಶಿಂಟುವು ಎಷ್ಟು ಜೋರಾಗಿ ತುಳಿದನೋ ಅಷ್ಟು ಜೋರಾಗಿ ಶಬ್ದ ಉಂಟಾಯಿತು. ತಾನು ಮೊದಲು ಕೇಳಿದ ಶಬ್ಧದಂತೆಯೆ ಈಗ ಕೇಳಿಸುತ್ತಿತ್ತು.

ಶಿಂಟುವಿಗಿದ್ದ ಭಯವು ಹಾರಿ ಹೋಗಿ ಧೈರ್ಯವಂತನಾಗಿ ಅದು ಡೋಲನ್ನು ತನ್ನ ಮನೆ ಕಡೆಗೆ ಉರುಳಿಸಿಕೊಂಡು ಹೋಗಿ, ಘರ್ಜಿಸುವ ಢೋಲಿನ ನಾದವನ್ನು ಮಾಡಿತು ಅದರ ಹೆಂಡತಿಗೆ ತನ್ನ ಗಂಡನ ಧೈರ್ಯವನ್ನು ಕಂಡು ಆಶ್ಚರ್ಯವಾಗಿ ಹಿಂತಿರುಗಿ ಮನೆಗೆ ಕರೆದುಕೊಂಡಳು.

ನೀತಿ:ಭಯವೇ ದುರ್ಬಲತೆ-ಧೈರ್ಯವೇ ಶಕ್ತಿ.

beautifulhdwallpaper.com

# ಕನ್ನಡದ ಕೈವಾರಿ

ಕನ್ನಡವ ನುಡಿವೆನು
ಕನ್ನಡದ ಕೈವಾರಿ
ಹಗಲಿರುಳು ಉಸುರಿಸುವೆ
ಕನ್ನಡದ ಕಸ್ತೂರಿ

ಮೈಮನ ಕಣಕಣ
ಜೀವನ ಸ್ಪಂದನ
ಗುನುಗುನು ತನನನ
ಹಾಡಿನ ಅನುಕ್ಷಣ

ಚಟಪಟ ಅರಳಿನ
ಮಾತಿನ ಚೇತನ
ಡಣಡಣ ಗಂಟೆಯ
ನಾದದ ಮೋದದ

ಜುಳುಜುಳು ನೀರಿನ
ಮೋಹನ ರಾಗದ
ಲಲಲಲ ನನನನ
ಸುಗತಿಯ ಸುಲಲಿತ

ಘಮ ಘಮ ಸುಮನದ
ಗಂಧದ ಚೆಂದದ
ಪುಳು ಪುಳು ಹಣ್ಣಿನ
ತಿರುಳಿನ ಮಧುರಿಮ

ಸಿಹಿ ಸಿಹಿ ಜೇನಿನ
ಸೊಗಸಿನ ಔತಣ
ಅನುಪಮ ಸುಖವಹ
ಅದ್ಭುತ ಭಾವದ

ಕನಸಿನ ಮನಸಿನ
ನಿಲುವಿನ ಚೆಲುವಿನ
ಬಸಿರಿನ ಉಸಿರಿನ
ಸ್ಫೂರ್ತಿಯ ಕಾರಣ

# ಯಾರು ಇಲ್ಲದ ಗಳಿಗೆಯಲ್ಲಿ

ಯಾರು ಇಲ್ಲದ ಗಳಿಗೆಯಲ್ಲಿ
ನಿನ್ನ ನೆನಪು ಬರುವುದು
ನೆನೆದು ಮನವು ಗರಿಯಕೆದರಿ
ನವಿಲಿನಂತೆ ಕುಣಿವುದು

ವನದ ತುಂಬ ಹೂವು ಅರಳಿ
ಚಿತ್ರಶಾಲೆ ತೆರೆವುದು
ಮತಿಗೆ  ಗಂಧ ರಾಗ ಎರೆದು
ಸುರೆಯ ಸುಖವನಿಡುವುದು

ನಲಿವ ಅಲೆಯ ಚೆಲುವ ಸರದಿ
ಕೆಂಪು ಕಮಲ ನಗುವವು
ಅಲೆಯನೇರಿ ಬರುವ ಗಾಳಿ
ದಳವ ಕೇಳಿಗೆಳೆವುದು

ಹಸಿರು ಮರದ ಮನೆಯಹಕ್ಕಿ
ಮುಗಿಲು ಬಯಲಲುಲಿವುದು
ಬೆಳ್ಳಿ ಮೋಡ ಮುಗಿಲು ಮುತ್ತಿ
ನೀಲಿ ಬೆಳಕ ಸುರಿವುದು

ಮರೆಗೆ ನಿಂತು ತೋರದಂತೆ
ತೋರುತಿರುವ ನೆನಪಿದೆ
ಸುಖದ ಲೋಕ ಬೆರಗುವಂಥ
ಬೇರೆ ಏನು ಬೇಕಿದೆ.


# ಕಾಣದ್ದು......

ಬೆಸೆದಿಟ್ಟದಿಂಬು ಹಾಸಿಗೆ
ವರ್ಷನಾದರೂ
ಬಿಸಿಯಾಗುವುದಿಲ್ಲ
ಬರೀ ಬೆಸುಗೆಗೆ

ಯಾವ ಅಮಲೂ ಇಲ್ಲ
ಬೆವೆತು ಒದ್ದೆಯಾದರೂ
ಮೈ ನಡುಗಬೇಗು
ಅದರುವ ತುಟಿಗಳು

ಅಗರುವ ತುಟಿಗಳು
ಅವನ ಆಯಾಸ
ಪರಿಹರಿಸಬೇಕು
ಬಿಗಿದಪ್ಪದ ತೋಳು

ಸಿಹಿನಿದ್ದೆಗೂಬೇಕು
ಮೈಮರೆತಮರುಕ್ಷಣವೇ
ಮಗ್ಗಲು ಬಗಲಾಯಿಸಿದರೇ
ಇನ್ನೇನು ಮಾಡಬೇಕು.....


DEGITAL PAINTING BY :ARSHIYA

# Quiz

1. Fat is reduced by milk. Is it true?
   =true[The calcium in milk, reduces the fat in our body]
2. Which Indian state is called the 'Emerald state'?
   =Bihar.
3. which is the 'queen of spices'?
   =cardamom
4. which hormone reduces cholesterol?
   =leptin.'
5. How many hours do Indians work per week?
   =India
6. which country exports Hippopotamus?
   =Hungary
7. which is the motherland of 'pumpkin'?
   =Malaysia
8. which is the native land of cabbage?
   =South Europe and mediterranian region.
9. which vegetable has a lot of Iodine?
   =cabbage
10. who cultivated beetroot first as vegetable
    *=Greeks, Romans.*

# ತಾಯಿಯ ಮಮತೆ

ಪ್ರೀತಿ ಮಮತೆ ನೀಡುವಳು
ಅವಳೆ ಮಾದಲ ಗುರು
ವಾತ್ಸಲ್ಯವನ್ನು ತುಂಬುವಳು
ಇವಳೆ ಪ್ರತ್ಸಕ್ಷ ದೇವರು
ಬುದ್ಧಿಯನ್ನು ಹೇಳುವಳು
ವಿನಯವನು ನೀಡುವಳು
ಸ್ನೇಹವನು ಬೆಳೆಸುವಳು
ನಮ್ಮಯ  ಪ್ರೀತಿಯ ತಾಯಿಇವಳು
ಖುಷಿಯನು ನೀಡಿ
ದುಃಖವ ಮರೆಸಿ
ಪ್ರೀತಿಯ ನೀಡುವಳು
ನನ್ನಯ ಮಮತೆಯ ತಾಯಿಯಿವಳು

# INDIAN REPUBLIC DAY

JANUARY 26 1950 IS ONE OF THE MOST IMPORTANT DAYS IN THE HISTORY OF INDEPENDENT INDIA. ON THIS DAY THE CONSTITUTION OF INDIA CAME INTO FORCE OF A TRULY SOVERGIN STATE WAS BORN ATTAINING INDEPENDENCE AND BECOMING A REPUBLIC NATION WAS THE BIGGEST CHALLENGER THAT INDIA HAD TO FACE IN THE 20 TH CENTURY . THE PEOPLE OF INDIA SACRIFICED THEIR LIFE FOR THE SAKE OF NATION'S FREEDOM . AND STOOD FIRMLY ALONG WITH POLITICAL LEADERS TO DRIVE AWAY THE BRITISH . AT LAST ON AUGUST 15 1947 , A CENTURY LONG FREEDOM STRUGGLE CAME TO AN END AND INDIA BECAME INDEPENDENT ON AUGUST 15 1947 , IT WAS STILL UNDER THE GOVERNANCE OF BRITISH EMPIRE UNTIL THE CONSTITUTION OF INDIA CAME INTO THE FORCE , KING , GORGE VI HEADED THE GOVERMENT OF INDEPENDENT OF INDIA .

ON JANUARY 26 , 1950 WHO THE CONSTITUTION OF INDIA CAME TO FORCE .IMMEDIATELY AFTER THE INDEPENDENCE OF INDIA , ON AUGUST 12 1947 , THE DRAFTING BOARD WAS APPOINTED BY THE CONSTIUENT ASSEMBLY , WITH THE BHEEM ROA AMBEDKAR AS THE CHAIRMAN ALONG WITH SIX OTHERS MEMBERS AS CONSTITUTIONAL ADVISER . IT TOOK AROUND 2 YEARS , 11MONTHS , AND 18 DAYS TO BUILD AT CONSTITUTION OF INDIA . AT THE OF COMMENCEMENT , THE CONSTITUTION HAD 395 ARTICLES IN 22 PARTS AND 8 SCHEDULES CONSISTING ASSEMBLY ADOPTED NATION'S CONSTITUTION ON NOVEMBER 26 , 1949 AND THE JANUARY 26 OF THE FOLLOWING YEARS WAS CHOSEN AS THE REPUBLIC AND THE RIGHTS OF ITS CITIZENS BROUGHT TO A CONCERT FORM .

JANUARY 26 IS CELEBRATED WITH INTO HONOUR THE SACRIFICE AND STRUGGLE INDIANS FREEDOM ACTIVITIES AND THOSE WHO PARTICIPATED IN MAKING THE COUNTRY'S CONSTITUTION . ON THIS AUSPICIOUS PRESIDENT OF INDIA HOST THE TRICOLOUR NATIONAL FLAG AT THE RED FORT AND ADDRESS THE NATION FORM ITS GAMPART . REPUBLIC DAY HAD A REMARKABLE HISTORY . HAS A TREMENDOUS PRESENT AND WILL HAVE BRIGHT FUTURE .

THANK YOU .

By,
KADEEJATH ASHURA

# ಅನೇಕದಲ್ಲಿ ಏಕ

ಯಾವದಾರಿಯಾದರೇನು
ಗುರಿಯು ಒಂದೆ ಅಲ್ಲವೆ
ಯಾವ ಮಂತ್ರಜಪಿಸಲೇನು
ಧ್ಯಾನ ಆದೆ ಆಲ್ಲವೆ

ಆರುಳು ಎಲ್ಲಿ ಬಿರಿದರೇನು
ಸುರಿವ ಗಂಧ ಬೇರೆಯೇನು
ನೂರು ಬಣ್ಣ ವಾದರೇನು
ಕಣ್ಣ ಗಂದ ಹಲವು ಏನು

ಎನಿತು ದೀಪ ಮಿನುಗಲೇನು
ಬೆಳಕುಭಾವ ಬೇರೆ ಏನು
ರಾಗ ನೂರು ಮೊಳಗಲೇನು
ಮೊರೆಯು ಒಂದೆ ಕೇಳದೇನು

ಏಸು ಭಾಷೆ ಉಸುರಲೇನು
ಸೂಸುವರ್ಥ ಭಿನ್ನವೇನು
ಜೀವಕೋಟಿ ಗುಣಿಸಲೇನು
ಆಂತರಾತ್ಮ ಗುಣಿತವೇನು

# ತೊದಲು ನುಡಿಯಲಿ

ತೊದಲು ನುಡಿಯಲಿ ಕುಣಿವ ನಗೆಯಲಿ
ಕಂಡ ಕಾರಣ ಪುರುಷನೆ
ಮುಗ್ಧ ಮಾಗದಲಿ ದುಗ್ಧ ಭಾವದಿ
ಹೊಳೆವ ಪೂರ್ಣದ್ತನೆ
ಆಟಪಾಠದಿ  ಊಟ ನೋಟದಿ
ಪುಟಿವ ಚೇತನ ಮೂರುತಿ
ಜನನಿ ಜನಕರ ಪೀತಿಪು ಭೆಯಲ
ಬೆಳಕು ಬಾವುಟ ಕೀರುತಿ
ಮನೆಯ ಅಂಗಳದೊಳನ ತಿಂಗಳ
ತರಳನದೆಯೊಳ ಪರಿಮಳ
ಗಂಧವಾಗಿಹ ನಿರ್ಮಲ

# ಬಾಳ ನಡೆ


ಕಾಲಚಕ್ರ ಉರುಳುತಲಿ
ಯಂತ್ರ ತಂತ್ರ ಹೆಚ್ಚುತಲಿ
ಎಲ್ಲವೂ ಬದಲಾಗುತಲಿ
ನೀ ಎಲ್ಲವನೂ ಕಲಿ

ಭಯದಿಂದ ಕೂಗುವುದು ಸಲ್ಲ
ಧೈರ್ಯದಿ ಮುನ್ನಡೆಸಬಹುದಲ್ಲ
ಈ ಯುಗಕಿದು ಹೊಸದಲ್ಲವಲ್ಲ
ಬದಲಾವಣೆಯ ಬಲ್ಲರು ಎಲ್ಲ

ಭಯವೇಕೆ ಭಯವೇಕೆ
ಆತ್ಮಸ್ಥೈರ್ಯವೆ ಮುಖ್ಯ ಇದಕೆ
ಸುಪಥದಿ ಸಾಗಲು ಹಿಂಜರಿವುದೇಕೆ
ಮುನ್ನುಗ್ಗಿ ಕಾಣು ಸತ್ಯದಾ ಬೆಳಕೆ

ನಡೆ ಮುಂದೆ ನಡೆ ಮುಂದೆ
ಸಾಗಲು ನೀ ಬಂದೆ
ಜಾರದೆ ಬೀಳದೆ ಎಡವದೆ
ಸತ್ತ್ವಜೆಯಾಗು ನೀ ಎಂದೆ.

# Digital Painting



By,
Fathimath Arshiya
9B

# School  life best life

Our school life is always the best time of our lives. further more,  it is the only time where we can meet my friends. School has a very important place in our life. Its not only trains our mind, but makes the soul thrive. Our school time is the only time which we enjoy a lot. School is the building step in each of our lives. It not only educates us and builds our careers, but also develops us as a  person. During this time,we experience physical development, emotions, friendship , relationship , and especially knowledge but we was beyond those expectations in school life. We not only learn history ,maths,social, science etc... but every aspect of life is given time.

School provides opportunity to the students to be disciplined . It is the right place to fulfil their dreams. In school , all the students read in a spirit of togetherness. They forget their joys and sorrows. We learn, we make friends, we respect  teachers and we obey rules. Ever thing is taught in a school. School is a meeting place of students and teachers . From here, a student learns how to adjust  himself with the society at life. We can also say that school is a jail , the cells are the classes , teachers are the security guards and we are the prisoners but really it is our second home and teachers are our parents .

Education is not just about going to school and getting a degree. It's about widening our know ledge and absorbing the truth about life. A school is never  a mere structure made out of bricks and stone . It i made from memories , successes , failures , happiness and  part of everyone's childhood. we may forget life's truth and lie , but the moments spent in school are hard to die. Also we may forget the closest of our relatives, you may forget receiving your first pay check, but i assure you, you will not forget your school friends and the beautiful moment from your school life. School may be hard, annoying and irritating . But admit it, you're going to miss it when it ends, school life is just a heaven, now

going to miss those days

***"School life is the best life"***

# ನದಿ

ನದಿಯೆ ನಿನ್ನ ಸೊಬಗ ನಾನು
ಮುದದಿ ನೋಡಿ ನಲಿಯುವೆ
ಎದೆಯ ಕೊಳದ ಕದವ ತೆರೆದು
ಸುಧೆಯ ನೀಂಟಿ ಹರಿಯುವೆ

ಗುಡ್ಡ ಬೆಟ್ಟದಲ್ಲಿ ಜನಿಸಿ
ಒಡ್ಡ ಕಡೆಯನೆಲ್ಲ ಬಿಡಿಸಿ
ಗಿಡ್ಡ ರೂಪದಿಂದ ಸಾಗಿ
ದೊಡ್ಡ ನದಿಯೆ ಆಗುವೆ

ಮುಂದೆ ಸಾಗಿ ಬಯಲು
ಮಂದಗಮನ ಪಡೆಯುವ
ಕುಂದನೆಲ್ಲಾ ತೊಳೆದು ನೀನು
ಅಂದವವಾಗಿ ಸಾಗುವೆ

ಕೆಲದಿ ಬಲದಿ ಪೈರು ಪಚ್ಚೆ
ಹೊಲವ ಹಿಗ್ಗಿ ನೋಡುವೆ
ಹಲವು ತೊರೆಗಳೊಂದು ಗೂಡಿ
ಬಲವ ಹೊಂದಿ ಹರಿಯುವೆ

ಭರದಿ ಹರಿದು ಕಡಲ ಸೇರಿ
ಒಡಲ ತುಂಬಿ ಮೊರೆಯುವೆ
ಇನಿಯ ಶರಧಿ ಮುದದಿ ನಗಲು
ಸನಿಹ ಸೇರಿ ನಾಚುವೆ

# ನಗುವಿ ಏಕೆ ಚಂದಿರ

ನಗುವಿ ಏಕೆ ಚಂದಿರ
ಇರುಳ ವಿಶ್ವ ಮಂದಿರ
ನೀನು ಮೇಲೆ ತೇಲುತಲ್ಲಿ
ನಾವು ನಿಂತು ನೋಡುತಿಲ್ಲಿ
ನಮ್ಮ ನೋವು ನಲಿವು ಕಂಡು
ನಕ್ಕು ನಗಿಸಿ ತೊಳಗುದೇನು
ಹಳ್ಳ ಹೊಳೆಗೆ ಬಾವಿ ಕೆರೆಗೆ
ಇಳಿದು ಅಲೆಯನೇರಿ ಇಳಿದು
ಜಡದ ಮನಕೆ ಮುದವನೆರೆದು
ದುಗುಡವಳಿವ ಆಟವೇನು
ಹಗಲು ತುಂಬ ಬಿಸಿಲನುಂಡು
ಕೆಂಡವಾಗಿ ಬೆಂದ ಜಗದ
ಎದೆಗೆ ತಂಪು ಕಂಪು ಸುರಿದು
ಶಾಂತ ಭುವನ ತೆರೆಯುದೇನು
ನಿನ್ನ ನೀತಿ ನಿನ್ನ ರೀತಿ
ಭುವನಕೆಲ್ಲ ತಂದ ಪ್ರೀತಿ
ದಿನದ ಝುಳವ ಇರುಳ ಭಯವ
ಕಳೆವ ಹೊಳೆವ ತಂಪು ಜ್ಯೋತಿ

# ತೊದಲು ನುಡಿಯಲಿ

ತೊದಲು ನುಡಿಯಲಿ ಕುಣಿವ  ನಗೆಯಲಿ
ಕಂಡ ಕಾರಣ ಪುರುಷನೆ
ಮುಗ್ಧ ಮಾಗದಲಿ ದುಗ್ಧ ಭಾವದಿ

ಹೊಳೆವ ಪೂರ್ಣದ್ತನೆ
ಆಟಪಾಠದಿ  ಊಟ ನೋಟದಿ
ಪುಟಿವ ಚೇತನ ಮೂರುತಿ

ಜನನಿ ಜನಕರ ಪೀತಿಪು ಭೆಯಲಿ
ಬೆಳಕು ಬಾವುಟ ಕೀರುತಿ
ಮನೆಯ ಅಂಗಳದೊಳನ ತಿಂಗಳ

ತರಳನದೆಯೊಳ ಪರಿಮಳ
ಗಂಧವಾಗಿಹ ನಿರ್ಮಲ


# <u>Banana tree</u>

**Banana is a wholesome food.The plantcontains many medicinal qualities.It is the indian variety that stands first in terms of nutrition as well as medicinal quality.**

**Musa sapientum is the scientific name of the plant.The tree grows up to the height of about three metres.After ten months of its growth,it begins to bear fruits.The fruit grows directly from the tuber.Edible parts of the plants are the fruit and the stem.But the entire plant contains medicinal properties.**

**It isthe sourse of various vitamins and minerals.According to Ayurveda,it reducesrheumatism and pitham.Problems caused due to lack of fibre in the diet can be tackled using the stem of the plant.**

***Children’s tiredness can be treated  withraw banana dried powdered and roasted in ghee.The powdered form of banana shoot is a good remedy for burns.***


Digital Painting
By: Fathimath Arshiya
IX B

# Benefits of DRY FRUITS in Skin Care!

## Avocado



- -Powerhouse of **Vitamins**
- -Excellent **moisturizing** agent

## Apricot



- -**Removes** blackheads, whiteheads.
- -It makes the **skin firm.**

## Walnut



- -Can be used as a **face scrubs.**
- -**Reduces** inflammation.

## Pistachio



- -As an **anti-ageing agent.**
- -Provides **moisture** & **softness.**

©StylEnrich.com

# ***GLOBAL WARMING***

Global warming is a phenomena in which the
earth temperature increases due to increase in the level of carbon dioxide in the atmosphere .Increase in the level of carbon dioxide is due to many reason. Mainly by human activities like cutting of trees ;destroy the biodiversity the climate changes and the hotness increases . The glacier meets and join river . Rise in the water way lead to flood.
There above mentioned problem are by cutting of trees.

Not only in there terms also in food
usage of agriculture land for non-agricultural
purposes:-constructing building in agricultural land is a difficult look . Putting mud in the land
for several years from where is the mud ?
It is formthe bottom of slopes . When stability of slope is changed
it lead to landslide .

Agricultural land decreases by day by day. Buildings are increases temperature is above increasing .factories are the ware for our world the waste is displaced into the factories and the smoke is released into air . Water we drink is polluted , the air we breath is not pure for all these problems we have only one solution . It is planting more trees .there is no more short day .we have to get into the soil itself it is the urgent need of times now. We should not use many electronic appliances . We should use solar for our daily uses for the agricultural use, using wind mill etc . There actions should be made quickly , if not the earth will be called highly selfish generation , as our ancestors gifted the pure ,full animals and birds , colour full sweet sounds nature let us conserve our nature .if we cut one tree plant 2 trees . this was the message told by our ancestor, but now we are cutting many trees and not even planting a tree .this is not fail! Today onwards let us plant a tree.

# ***Evils of child marriage***

*In India , since centuries , the system of child marriage has been prevalent. Customs and traditions had accepted this system. In particular , the backward communities and rigid families of higher castes also followed this system. The system started changing from the seventies of this century.*

*Advantage of this system was that the age of boys and girls was low at the time of their marriage. So , they could labour, Legislations also prohibit these. However , these laws are not properly implemented , so child labour is still in existence.*

# ಅಜ್ಜಿ ಎಂಬ ಭೂಗರ್ಭ

ಅಜ್ಜಿಯೆನ್ನುವ ಅಚ್ಚರಿ
ಆಗುವುದಿಲ್ಲ ಎಂದೆಂದಿಗು ಕಿರಿಕಿರಿ
ಅಜ್ಜಿ ಹೇಳಿದೆಲ್ಲಾ ಸರಿ
ಅವರೇ ನಮ್ಮ ಬಾಳಿನ ಬೆಳಕಿನ ಸಿರಿ

ಮಾಡುವುದಿಲ್ಲ ಆದೇಶ
ಆಗಿಹರು ನಮಗೆ ಆದರ್ಶ
ಅಜ್ಜಿಯೆನ್ನುವ ಎರಡಕ್ಷರದ ಪದ
ಬೆಳಗಿಸುತಿಹುದು ನಮ್ಮನ್ನು ಸದಾ

ಅವರ ಕಥೆಯ ಗಮ್ಮತ್ತು
ಕೂಡಿದೆ ಅದರಲಿ ಜ್ಞಾನದ ಸಂಪತ್ತು
ಹೇಳುವರು ಸದಾ ಕಿವಿ ಮಾತು
ಅದರೊಂದಿಗೆ ನೀಡುವರು ಸಿಹಿ ಮುತ್ತು

ಅಜ್ಜಿಯೆನ್ನುವ ತಂಪಾದ ಗಾಳಿ
ಬೀಸಿ ತರುವರು ಆನಂದದ ದಾಳಿ
ವಿವಿಧ ಖನಿಜಗಳನ್ನು ಹೊಂದಿದ
ಅಜ್ಜಿಎಂಬ ಭೂಗರ್ಭ
*ಹೊಂದಿಲ್ಲ ಅವರು ಸ್ವಲ್ಪವಾದರು ಜಂಭ.*

.......................

By:sumayya IXB

# ಗುಗ್ಲಿಮೋ ಮಾರ್ಕೋನಿ

ರೇಡಿಯೋ ಎನ್ನುವುದು ಜನಸಾಮಾನ್ಯರಿಗೆ ಎಷ್ಟು ಪ್ರಿಯವಾಗಿತ್ತೆಂದರೆ ವಿಜ್ಞಾನದ ಬಗ್ಗೆ ಏನೇನೂ ಆಸಕ್ತಿ ಇಲ್ಲದವರೂ ಸಹಾ ರೇಡಿಯೋ ಕಂಡು ಹಿಡಿದವನು ಯಾರು ಎಂದರೆ ಮಾರ್ಕೋನಿ ಎಂದು ಉತ್ತರಿಸಬಲ್ಲವರಾಗಿದ್ದರು. ರೇಡಿಯೋ ಮನೋರಂಜನೆಯಿಂದ ಹಿಡಿದು ಸಮಗ್ರ ವಿಶ್ವದಾದ್ಯಂತ ವಿನಿಮಯ ಸಾಧನವಾಗುವಷ್ಟು ಬೃಹತ್ತಾಗಿ ಬೆಳೆಯಿತು.

ಮಾರ್ಕೋನಿಯ ಪೂರ್ಣ ಹೆಸರು ಗುಗ್ಲಿಮೊ ಮಾರ್ಕೋನಿ. ಇವನ ಜನನ ೧೮೭೪ ಏಪ್ರಿಲ್ ೨೫ ರಂದು ಇಟಲಿಯಲ್ಲಿ ಆಯಿತು. ಬೊಲಿಗ್ನ ಎಂಬಲ್ಲಿ ಈತನ ತಂದೆಯ ಎಸ್ಟೇಟ್ ಇತ್ತು. ಬಾಲ್ಯದಲ್ಲೇ ತಂದೆಯ ವಿರೋಧವನ್ನು ಲೆಕ್ಕಿಸದೆ ಮಾರ್ಕೋನಿ ವೈಜ್ಞಾನಿಕ ಪ್ರಯೋಗಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಿದ್ದನು. ಹಸಿವು- ದಾಹಗಳನ್ನು ಮರೆತುಬಿಡುತ್ತಿದ್ದ ಮಾರ್ಕೋನಿಗೆ ಅಮ್ಮನ ಪ್ರೀತಿ-ಪ್ರೋತ್ಸಾಹಗಳು ಪುಷ್ಕಳವಾಗಿದ್ದವು.

ಹೈರಿಚ್ ಹರ್ಡ್ ನ ಸಿಧ್ಧಾಂತ ಮಾರ್ಕೋನಿಗೆ ರೇಡಿಯೋ ತರಂಗಗಳ ಬಗ್ಗೆ ತಿಳಿಸಿತ್ತು. ಆ ಮೂಲಕ ಸುದ್ದಿಗಳನ್ನು ದೂರದವರಿಗೆ ತಲೂಪಿಸಬಹುದೆಂದು ಅರಿತಿದ್ದನು. ಆ ಕಾಲಕ್ಕೆ ವಿದ್ಯುತ್ ತಂತುಗಳನ್ನು ಬಳಸಿ ಸುದ್ದಿಗಳನ್ನು **morse code** ನಲ್ಲಿ ರವಾನಿಸಲಾಗುತ್ತಿದ್ದಿತ್ತು. ಮಾರ್ಕೋನಿಗೆ ಇದನ್ನು ಪರಿಷ್ಕರಿಸಿ, ಸುಧಾರಣೆಗಳನ್ನು ತರುವ ಹಂಬಲ ಉಂಟಾಗಿತ್ತು.

ಒಂದು ರಾತ್ರಿ ತಾಯಿಯನ್ನು ಎಬ್ಬಿಸಲು ಮಾರ್ಕೋನಿ ಅವಳಿಗೆ ಅಚ್ಚರಿಯೊಂದನ್ನು ತೋರಿಸುತ್ತಾನೆ. ಕೋಣೆಯೊಂದರ ಮೂಲೆಯಲ್ಲಿ ಇತರೇ ಉಪಕರಣಗಳ ಮಧ್ಯೆ ಒಮದು ಗಂಟೆಯನ್ನು ಇಡಲಾಗಿದೆ. ಮೂಲೆಗೆ ಹೋಗಿ ಒಂದು **morse key** ಯನ್ನು ಒತ್ತಿದನು. 30 ಅಡಿ ದೂರದಲ್ಲಿದ್ದ ವಿದ್ಯುತ್ ಗಂಟೆ ಶಬ್ದ ಮಾಡಿತು. ತಾಯಿ ಅಷ್ಟೇನು ಪ್ರಭಾವಿತಳಾಗದಿದ್ದರೂ ಮಗನನ್ನು ನಿರುತ್ತೇಜಪಡಿಸಲಿಲ್ಲ. ಮಾರ್ಕೋನಿ ತಂತಿರಹಿತವಾಗಿ [ **wireless** ] ಒಂದು ಸ್ಥಳದಿಂದ ಇನ್ನೊಂದೆಡೆಗೆ ಸುದ್ದಿ ಕಳುಹಿಸುವಂತೆ ಮಾಡುವ ಪ್ರಯತ್ನದಲ್ಲಿ ತೊಡಗಿದನು.

ಹೀಗೊಂದು ದಿನ ಮರ್ಕೋನಿ ತಾನು ಮಾಡಿದ ಟ್ರಾನ್ಸ್ ಮೀಟರನ್ನು ಗುಡ್ಡದ ಅಂಚಿನಲ್ಲಿ ಇರಿಸಿದನು. ಇನ್ನೊಂದು ತುದಿಯಲ್ಲಿ ರಿಸೀವರ್ ಇಟ್ಟನು. ರಸೀವರ್ ನ ಬಳಿ ತನ್ನ ಸೋದರ ಆಲ್ ಫ್ಯಾಂಗೊ ವನ್ನು ನಿಲ್ಲಿಸಿದನು. ಅಣ್ಣ ಟ್ರಾನ್ಸ್ ಮೀಟರ್ ನಿಂದ ಮಾತನಾಡುತ್ತಿದ್ದರೆ ತಮ್ಮ ಪ್ರತಿಕ್ರಿಯೆ ಕಳುಹಿಸುವಂತೆ ಮಾಡುವ ಪ್ರಯತ್ನದಲ್ಲಿ ತೊಡಗಿದನು.

೧೮೯೭ ರಲ್ಲಿ ಇಂಗ್ಲೆಂಡಿಗೆ ಬಂದಿದ್ದ ಮಾರ್ಕೋನಿ **wireless telegraphy** ಯ ಯಶಸ್ವೀ ಕಾರ್ಯನಿರ್ವಹಣೆಯನ್ನು ಪ್ರದರ್ಶಿಸಿದನು. ಇದು ವಿಜ್ಞಾನಿಗಳ , ಉನ್ನತಾಧಿಕಾರಿಗಳ ಪ್ರಶಂಸೆಗೆ ಪಾತ್ರವಾಯಿತು. ಬಳಿಕ ಮಾರ್ಕೋನಿ ೧೨ ಮೈಲಿಗಳಷ್ಟು ದೂರಕ್ಕೆ ರೇಡಿಯೋ ಸಂಪರ್ಕವನ್ನು ಸಾಧಿಸಿದನು. ತಂತಿರಹಿತ ಸಮಚಾರ ರವಾನೆಯ ಕನಸು ನನಸಾಯಿತು. ಮಾರ್ಕೋನಿ ತನ್ನ ಹೆಸರಿನಲ್ಲೇ ಒಂದು ಕಂಪನಿ ಸ್ಥಾಪಿಸಿದ್ದು ಆಯಿತು.

ವೇಲ್ಸ್ ರಾಜಕುಮಾರ ಒಮ್ಮೆ ಸಮುದ್ರ ಪ್ರಯಾಣ ಮಾಡುತ್ತಾ ದ್ವೀಪವೊಂದರ ಬಳಿ ಅಸ್ವಸ್ಥನಾದ. ಅವನ ಆರೋಗ್ಯ ಕುರಿತು ಆಗಿಂದಾಗ್ಗೆ ವಿಷಯ ತಿಳಿಯಲು ತಾಯಿಯ ಹೃದಯ ಚಡಪಡಿಸಿತು. ಈ ಸಂಧರ್ಭದಲ್ಲಿ ಮಾರ್ಕೋನಿ ತನ್ನ ಉಪಕರಣಗಳನ್ನು ಯಶಸ್ವಿಯಾಗಿ ಕಾರ್ಯಾಚರಣೆಯಲ್ಲಿ ತೊಡಗಿಸಿದನು. 15 ದಿನಗಳ ಅವಧಿಯಲ್ಲಿ ತಾಯಿ ಮತ್ತು ಮಗ 150 ಸಂದೇಶಗಳನ್ನು ವಿನಿಮಯ ಮಾಡಿಕೊಳ್ಳುವಂತಾಯಿತು. 1909 ಡಿಸಂಬರ್ 12 ರ ವೇಳೆಗೆ 'ಮಾರ್ಸ್' ಸಂಕೇತದಲ್ಲಿ 'S' ಅಕ್ಷರವನ್ನು ಅಟ್ಲಾಂಟಿಕ್ ಸಾಗರದ ಮೂಲಕ ರವಾನಿಸಲಾಯಿತು. ಹೀಗೆ ಮಾರ್ಕೋನಿ ರಾಜ ಪರಿವಾರದವರ ಗೌರವಕ್ಕೆ ಪಾತ್ರನಾದನು.

ಹೈರಿಚ್ ಹರ್ಡ್ಜ್ ನ ಸಿಧ್ದಾಂತಗಳ ಪರಿಷ್ಕೃತ ರೂಪವಾದ ಮಾರ್ಕೋನಿಯ ಸಂಶೋಧನೆ ಅವನನ್ನು ನೋಬೆಲ್ ಪುರಸ್ಕಾರಕ್ಕೆ ಅರ್ಹನನ್ನಾಗಿ ಮಾಡಿತು. ನಂತರ ಮಾರ್ಕೋನಿ ರೇಡಿಯೋ ಪ್ರೇಕ್ಷಣೆ [ **Transmission** ] ಗೆ ಸಂಬಂಧಪಟ್ಟ ಹಲವಾರು ಪ್ರಯೋಗಗಳನ್ನು ಫಲಪ್ರದವಾಗಿ ನಡೆಸಿದನು. 1920 ರಲ್ಲಿ ಮಾರ್ಕೋನಿ ಮತ್ತು ಅವನ ಗೆಳೆಯರು ನುಡಿಸಿದ ಸಂಗೀತ ಲಂಡನ್ ನಲ್ಲಿ ಪ್ರಸಾರವಾಯಿತು. ಅನೇಕ ಪಶ್ಚಾತ್ಯ ವಿಜ್ಞಾನಿಗಳಂತೆ ಮಾರ್ಕೋನಿಗೂ ಸಂಗೀತದಲ್ಲಿ ಅಭಿರುಚಿ ಇತ್ತು. ಜಗತ್ತಿನಾದ್ಯಂತ ಸಂಗೀತವನ್ನು ಹರಡಿದ ಖ್ಯಾತಿ ರೇಡಿಯೋಗೆ ದಕ್ಕಬೇಕು. 1922 ರಷ್ಟು ಹೊತ್ತಿಗೆ ಇಂಗ್ಲೆಂಡಿನಲ್ಲಿ ರೇಡಿಯೋ ಪ್ರಸಾರ ಮನೆಮನೆಗಳಲ್ಲಿ ಧ್ವನಿಸುವಂತಾಗಿತ್ತು.

ಒಂದು ಮಹಾನ್ ಅನ್ವೇಷಣೆಯ ಮೂಲಕ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ 'ಅಂತರ' ಗಳನ್ನು ತುಂಬಿದ ಈ ವಿಜ್ಞಾನಿ 1937 ಜುಲೈ 20 ರಂದು ಕಾಲವಾದನು.

# ಲಾರ್ಡ್ ರುದರ್ ಫೋರ್ಡ್

20 ನೇ ಶತಮಾನದ ಕೊನೆಯ ಭಾಗವನ್ನು 'ಸಂಶೋಧನಾ ದಶಕ' ಎಂದು ಕರೆಯಬಹುದು. ಹತ್ತು ಹಲವಾರು ಸಂಶೋಧನೆಗಳು ವೈಜ್ಞಾನಿಕ ಧಾರೆಯನ್ನು ಸಮೃದ್ಧಗೊಳಿಸಿದವು. ಪ್ರತಿಯೊಂದು ದ್ರವ್ಯವೂ ಪರಮಾಣುಗಳೆಂದು ಕರೆಯಲ್ಪಡುವ ಸಣ್ಣ ಕಣಗಳಿಂದ ಆಗಿದೆ ಎಂದೂ ಪರಮಾಣುವಿನ ಅಂತರಿಕ ರಚನೆಯನ್ನು ಕಂಡುಹಿಡಿದ ಧೀರೋದಾತ್ತ ವಿಜ್ಞಾನಿ ಸ್ಕಾಟ್ಲೆಂಡ್ ನ ಲಾರ್ಡ್ ರುದರ್ ಫೋರ್ಡ್.

೧೮೭೧ ನೆಯ ಆಗಸ್ಟ್ ೩೦ ರಂದು ನ್ಯೂಝಿಲಮಡ್ ನಲ್ಲಿ ಜನಿಸಿದ ರುದರ್ ಫೋರ್ಡ್ ಎಳೆತನದಿಂದಲೂ ಬುದ್ಧಿವಂತ. ಭೌತಶಾಸ್ತ್ರ, ರಸಾಯನಶಾಸ್ತ್ರ , ಗಣಿತಶಾಸ್ತ್ರಗಳಲ್ಲಿ ಮುಂದಿದ್ದನು. ಕ್ರೈಸ್ತ ಚರ್ಚ್ ನಲ್ಲಿ ವಿದ್ಯಾರ್ಥಿವೇತನದೊಂದಿಗೆ ಅಧ್ಯಯನ ಮಾಡಿ ವಿಜ್ಞಾನದಲ್ಲಿ ಪದವೀಧರನಾದನು.

ನಂತರ ವಿಶ್ವವಿದ್ಯಾನಿಲಯದ ನೆಲಮಾಳಿಗೆಯನ್ನು ಪ್ರಯೋಗಶಾಲೆಯನ್ನಾಗಿ ಏರ್ಪಡಿಸಿಕೊಂಡನು. ವಿದ್ಯುತ್ಕಾಂತ ತರಂಗಗಳನ್ನು ಉತ್ಪಾದಿಸುವ ಉಪಕರಣವೊಂದನ್ನು ತಯಾರು ಮಾಡಿದನು. ನಂತರ ಕೇಂಬ್ರಿಜ್ ಯೂನಿವರ್ಸಿಟಿಯ ಸ್ಕಾಲರ್ ಶಿಪ್ ಪಡೆದು ಕ್ಯಾವಂಡಿಶ್ ಲ್ಯಾಬೋರೇಟರಿಯಲ್ಲಿ ನಿರಂತರ ಸಂಶೋಧನೆಗಳಿಂದ ಎಲೆಕ್ಟ್ರಾನ್ ಆವಿಷ್ಕರಿಸಿ, ಮುಂದೆ Radio activity ಯನ್ನು ಕುರಿತು ಪ್ರಯೋಗಗಳಲ್ಲಿ ಮಗ್ನನಾದನು. ವಿಕಿರಣಶೀಲ ಪದಾರ್ಥಗಳಿಂದ ಹೊರಹುಮ್ಮುವ ಕಿರಣಗಳಲ್ಲಿ ಕೆಲವನ್ನು ಆಲ್ಫಾಕಿರಣಗಳೆಂದೂ, ಇನ್ನು ಕೆಲವನ್ನು ಬೀಟಾ ಕಿರಣಗಳೆಂದೂ ಹೆಸರಿಸಿದನು. ಈ ಮೂಲಕ ಪರಮಾಣು ರಚನೆಯ ಸಂಶೋಧನೆ ನಡೆಸಿ ಪರಮಣುಗಳಲ್ಲಿ ಅತೀ ಸಣ್ಣ ಬೀಜ ಇರುವುದನ್ನು ಕಂಡುಹಿಡಿದನು.

ನಂತರ ಕೆನಡಾ ಯೂನಿವರ್ಸಿಟಿಯಿಂದ ಮ್ಯಾಂಚಸ್ಟರ್ ಗೆ ಬಂದರು. ಇಲ್ಲಿಯೂ ವಿಕಿರಣಶೀಲ ವಸ್ತುಗಳೇ ಇವನ ಸಂಶೋಧನೆಯ ವಸ್ತುಗಳಾಗಿದ್ದವು. 1908 ರಲ್ಲಿ ರಸಾಯನಶಾಸ್ತ್ರದ ನೊಬೆಲ್ ಪ್ರಶಸ್ತಿಗೆ ಭಾಜನನಾದನು. 1911 ರಲ್ಲಿ ಚಿನ್ನದ ರೇಖಿನೊಂದಿಗೆ ಆಲ್ಫಾ ಕಿರಣಗಳ ಅಂತ್ ಕ್ರಿಯೆಯ ಪರಿಣಾಮದ ಬಗ್ಗೆ ಸಂಶೋಧನೆಗಳನ್ನು ನಡೆಸಿದ ರುದರ್ ಫೋರ್ಡ್ ಆ ಕಿರಣಗಳು ಧನಾತ್ಮಕವಾಗಿ ಆವೇಶಿತವಾದ ಕಣಗಳ ಪ್ರವಾಹ ಎಂದು , ಅವು Nelium ಪರಮಾಣುಗಳ ಬೀಜ ಕಣಗಳನ್ನು ಒಳಗೊಂಡಿವೆ ಎಂಬುದನ್ನು ಪ್ರಯೋಗಗಳ ಮೂಲಕ ಸಾಬೀತು ಪಡಿಸಿದನು.

1914 ರಲ್ಲಿ ಆರಂಭಗೊಂಡ ಮಹಾಯುದ್ಧ ಜಗತ್ತಿನಾದ್ಯಂತ ತನ್ನ ಕರಾಳ ನೆರಳನ್ನು ಚಾಚಿತ್ತು. ಹೆಚ್ಚಿನ ವಿಜ್ಞಾನಿಗಳು ದೇಶ ಬಿಟ್ಟು ಹೋದರು. ಲಾರ್ಡ್ ರುದರ್ ಫೋರ್ಡ್ ತನ್ನ ಕ್ಯಾವಂಡಿಶ್ ಲ್ಯಾಬೋರೇಟರಿಗೆ ಹಿಂತುರಿಗಿ ಪುನಃ ಹೊಸ ಅನ್ವೇಶಮೆಗಳಲ್ಲಿ ತೊಡಗಿದನು. 1917 ರ ವೇಳೆಗೆ ಒಂದು ಧಾತುವನ್ನು ಇನ್ನೊಂದುಧಾತುವಿನ ರೂಪಕ್ಕೆ ಪರಿವರ್ತಿಸಿದನು. ರಾಸಾಯನಿಕ ಸಾರಜನಕದ ಪರಮಾಣುಗಳನ್ನು ಆಲ್ಫಾ ಕಿರಣಗಳೊಂದಿಗೆ ಸ್ಫೋಟಿಸಿದಲ್ಲಿ ಸಾರಜನಕವನ್ನು ಆಮ್ಲಜನಕವನ್ನಾಗಿ ಬದಲಾಯಿಸಬಹುದೆನ್ನುವುದು ಹೊಸ ಅನ್ವೇಷಣೆ 1919 ರಲ್ಲಿ ಕ್ಯಾವಂಡಿಶ್ ಪ್ರೆಸ್ಡೆಂಟ್ ಸ್ಥಾನಕ್ಕೆ ಆಯ್ಕೆಯಾದನು.

1920 ರಲ್ಲಿ ರಾಯಲ್ ಸೊಸೈಟಿಯ ಸದಸ್ಯತ್ವ ಪಡೆದ ರುದರ್ ಫೋರ್ಡನು 1920 ರಲ್ಲಿ ಜಲಜನಕ ಬೀಜದ ಬಗ್ಗೆ ಮತ್ತಷ್ಟು ಸಂಶೋಧನೆ ನಡೆಸಿದನು.1931 ರಲ್ಲಿ ' ಬ್ಯಾರನ್ ರುದರ್ ಫೋರ್ಡ್ ಆಫ್ ನಾಲ್ಸನ್' ಎಂಬ ಅತ್ಯುಚ್ಚ ಗೌರವವನ್ನು ರುದರ್ ಫೋರ್ಡ್ ಪಡೆದುಕೊಂಡನು. 1937 ರ ಅಕ್ಟೋಬರ್ 19 ರಂದು ಈ ಸಾಧಕ ದಿವಂಗತರಾದರು.

# ಕಾಣದ ಕೈಗಳು

ನಾ ನಡೆಯುತಿಹ ಪಥದಲ್ಲಿ
ಎತ್ತ ನೋಡಿದರಲ್ಲಿ ಕಡು ಕತ್ತಲು
ಹೆಜ್ಜೆಯ ಇಡುತಿಹೆನು ಭಯದಲ್ಲಿ
ಕಾಣದ ಕೈಗಳು ಅಡಗಿದೆ ಸುತ್ತಲೂ II

ಜಾರುತಿಹ ಕಣ್ಣಂಚಿನ ಕಂಬನಿಯನು
ಸಂತೈಸಲು ಬರುತಿಹರು ಯಾರೊ
ನಡುಗುತಿಹ ದೀವನದ ಕಂಬವನು
ಉರುಳಿಸಲು ಹೊಂಚು ಹಾಕಿದರು ಯಾರೊ II

ಏಳು ಬೀಳಿನ ಈ ಮೂರು ದಿನದಲಿ
ಅಮೃತವನು ನೀಡಿದ ಆ ಕೈಗಳು
ಉರಿವ ಜ್ವಾಲೆಗೆ ತುಪ್ಪ ಸುರಿದಿಹ
ಕೆಂಪು ಕೆಂಡವ ಕಾರಿದ ಆ ಕಣ್ಗಳು II

ತೂಗುತಿಹೆ ಬದುಕೆಂಬ ಜೋಕಾಲಿ
ಭರವಸೆಯ ತಂಗಾಳಿ
ಜೀವನದ ಒಗಟ ನೀ ಕಲಿಯುತಲಿ
ಮನವು ನೆಮ್ಮದಿಯ ಅರಸುತಿರಲಿ II

-ಅನನ್ಯ.ವೈ.ಕೆ
9 ಸಿ ತರಗತಿ

# ನವ ಕೇರಳ ನಿರ್ಮಾಣ

ನಮ್ಮೀ ಕೇರಳ ದೇವರ ನಾಡು
ಆಗಿದೆ ಈಗ ಕಸಕೊಳೆಗಳ ಬೀಡು
ಅದನ್ನು ಸ್ವಚ್ಛಗೊಳಿಸುತ್ತಾ
ಜಾತಿ ಬೇಧಗಳನ್ನು ಮರೆಯುತ್ತಾ
ಒಂದಾಗಿ , ಒಟ್ಟಾಗಿ ನಾವು ಮಾಡುವ
ನವ ಕೇರಳ ನಿರ್ಮಾಣವ II

ನೆರೆಗೆ ಕೊಚ್ಚಿಕೊಂಡು ಹೋಯ್ತು ನಮ್ಮ ನಾಡು
ನೆರೆಯಿಂದ ರಕ್ಷಿಸಲು ಬಂತು ಸೈನಿಕರ ಬೀಡು
ಪಟ್ಟರು ಕಷ್ಟವ ಇಷ್ಟ ಪಟ್ಟು
ನಮ್ಮ ನಾಡಿನ ಜನರ ಉಳಿಸುವ ಪಣತೊಟ್ಟು
ರಕ್ಷಿಸುತ ನಮ್ಮೂರ ದನರನ್ನು
ನೆರವೇರಿಸಿದರು ಅವರ ಕರ್ತವ್ಯವನ್ನು II

ಹಚ್ಚ ಹಸುರಿನಿಂದ ಕೂಡಿ
ಪ್ರಕೃತಿ ಮಾಡುತಿತ್ತು ಮೋಡಿ
ಆದರೆ ಈಗ ಜನರ ಕಣ್ಣಿನಲ್ಲಿ ಕಂಬನಿ
ಕೇಳುತಿದೆ ಅಸಹಾಯಕ ಮಕ್ಕಳು ಅರಚುವ ಧ್ವನಿ II

ಬನ್ನಿ ಮುಂದೆ ಸಾಗೋಣ
ಅವರ ಕಂಬನಿ ಒರೆಸೋಣ
ಅವರಿಗೆ ಸಹಾಯ ಮಾಡೋಣ
ಅವರಲಿ ಹರುಷವ ತುಂಬೋಣ
ಕೇರಳ ರಾಜ್ಯೋತ್ಸವವಿಂದು
ನವ ಕೇರಳ ನಿರ್ಮಾಣವು
ಶುರುವಾಗಲಿ ಇಂದು II

- ಸುಮನ
8 A ತರಗತಿ


# ನಕ್ಕು ಬಿಡಿ

ನಕ್ಕು ಬಿಡಿ, ನಕ್ಕು ಬಿಡಿ, ನಕ್ಕು ಬಿಡಿ ಗೆಳೆಯರೇ
ಹೊಟ್ಟೆತುಂಬ ನಕ್ಕು ನೀವು ಮನದ ನೋವ ಮರೆಯಿರಿ
ಅತ್ತು ಬಿಡಿ, ಅತ್ತು ಬಿಡಿ, ಅತ್ತು ಬಿಡಿ ಗೆಳೆಯರೇ
ಹೃದಯ ತುಂಬಿ ಅತ್ತು ನೀವು ಶಿರದ ಭಾರ ತೊರೆಯಿರಿ

ವಿಧಿಯ ಆಟ, ಜಗದ ನೋಟ ನಿಮಗೆ ಎಂತು ತಿಳಿವುದು
ತಪ್ಪು ಆಟವಾಡಿ ನಾವು ಸೋತು ಸುಣ್ಣವಾದೆವು
ಚಿಂತೆ ಬಿಡಿ, ಚಿಂತೆ ಬಿಡಿ ಎದ್ದು ನಿಲ್ಲಿ ಗೆಳೆಯರೇ
ನೋವು ನಲಿವು ಸೋಲು ಗೆಲುವು ನಮಗೆ ಎಂದು ಇರುವುದು

ಹಾಡಿ ಹೊಗಳಿ ಧ್ಯಾನ ಮಾಡಿ ಎಂದು ಜಗದ ಒಡೆಯನ
ಸೋಲಿನಲ್ಲು ಗೆಲುವ ಕೊಡುವ ಭಾರಿ ಮಾಯಗಾರನ
ಮನದ ನೋವ ಎದೆಯಕಾವ ಕಳೆದು ತಂಪ ಕೊಡುವನು
ಒಲುಮೆಯಿಂದ ಹಿರಿಮೆಯಿಂದ ನಮ್ಮ ನಿಮ್ಮ ಕಾಯ್ವನು

-ಅನುಜ್ಞಾಲಕ್ಷ್ಮಿ.ಪಿ
VIII ಎ




# ಒಂದು ಕನಸು

*ಕಂಡೆನೊಂದು ಕನಸು ನಾನು*
*ಚಿನ್ನ ಕೇಳು ಹೇಳುವೆ*
*ನೀಲಿ ಮುಗಿಲಿನೊಳಗೆ ನಿಂತು*
*ಬಿಂಬವೊಂದು ಬೆಳಕ ಚೆಲ್ಲಿ*
*ಎನ್ನ ಮನದ ಸುಮವು ಅರಳಿ*
*ತಂಪು ಗಂಧ ಬೀರಿದಂತೆ*
*ಸುತ್ತಮುತ್ತ ಹೊನ್ನ ಮಳೆಯು*
*ಚಿತ್ತ ವೆನ್ನ ನವಿಲು ಕುಣಿದು*
*ನೆಲದ ಸೊಲ್ಲು ಕೇಳದಿರಲು*
*ನಾನೆ ನಾನು ಹಾಡಿದಂತೆ*
*ಕೊಳಲಗಾನ ಕಿವಿಯ ತುಂಬಿ*
*ಇಳೆಯ ಮಾತು ಕೇಳದಂತೆ*
*ಬೆಳಕು ಭವ ನಾದ ಬೆರೆದ*
*ಹೊಸತು ಲೋಕದಿರುವ ಕಂಡೆ*

**By,**
**Khadeejath Ashoora**
**8A**

# ಸಾಕು

ಸರಿ ರಾತ್ರಿಯಾಳಗೆ
ಮೈಛಳಿ ಬಿಡಿಸಲು
ನಿನ್ನಪ್ಪಿದ ಕನಸು ಸಾಕು
ಬದುಕ ಸಾಗಿಸಲು

ಸುಳ್ಳು ನುಡಿಗಳ
ನೆಮ್ಮದಿ ಸಾಕು
ಭ್ರಮಗಳಲ್ಲೇ
ಬದುಕುವವಳಿಗೆ

ಅನಿವಾರ್ಯತೆಯ
ಸಾಂಗತ್ಯ ಸಾಕು
ಧಾವಂತಗಳೇ
ಇರದ ದಾರಿಗೆ

ಮಿಣುಕು ಹುಳದ
ಬೆಳಕು ಸಾಕು
ಪ್ರೀತಿಸಲದ್ಯಾಕೊ
ನೀನೇ ಬೇಕು

# ಫೂಟ್ ಬಾಲ್ ಆಟ

ಒಲ್ಗಿಪಿಯಾ ನಗರ. ಈ ನಗರದಲ್ಲಿ ಪ್ರತೀ ವರ್ಷವೂ ಫೂಟ್ ಬೋಲ್ ಆಟ ಆಡುತಿದ್ದರು. ಫುಟ್ ಬೋಲ್ ಟೀಮಿನಲ್ಲಿ ಶಿವಾಜಿ ಗುಂಪು ಪ್ರತೀ ವರ್ಷವೂ ಆಟ ಆಡುವಾಗ ಅವರು ಜಗಳವಾಡುತ್ತಿದ್ದರು. ಅದುದರಿಂದ ಅವರು ಪ್ರತೀ ವರ್ಷ ಸೋಲುತ್ತಿದ್ದರು. ಈ ವರ್ಷ ಜನವರಿ ಒಂದನೇ ತಾರೀಕಿಗೆ ಫುಟ್ ಬಾಲ್ ಆಟ ತೀರ್ಮಾನಿಸಲಾಯಿತು.

ಜನವರಿ ತಿಂಗಳು ಬಂದಿತು. ಎರಡು ಗುಂಪುಗಳಾಗಿ ಮಾಡಿದರು. ಒಂದು ಗುಂಪಿನ ಹೆಸರು ಶಿವಾಜಿ ಮತ್ತೊಂದು ಪಾರ್ವತಿ. ಆಟ ಆರಂಭವಾಯಿತು. ಎರಡು ಗುಂಪುಗಳು ಒಳ್ಳೆಯ ರೀತಿಯಿಂದ ಆಡುತಿದ್ದರು. ಅವರ ಅಂಕೆಗಳು ಸಮಾನವಾಯಿತು. ಒಂದು ಅಂಕೆ ಯಾರಿಗೆ ಸಿಕ್ಕುಗದೋ ಅವರು ಗೆಲ್ಲುತ್ತಾರೆ ಎಂದು ಹೇಳುತ್ತಾ ಆಟ ಶುರುವಾಯಿತು ಶಿವಾಜಿ ಗುಂಪಿನವರು ಜಗಳವಾಡುತ್ತಿದ್ದರು. ಆಗ ಆ ಗುಂಪಿನ ಒಬ್ಬ ಹೇಳಿದ ಈಗ ಜಗಳ ಮಾಡುವುದಲ್ಲ ನಾವು ಒಗ್ಗಟ್ಟಿನಿಂದ ಆಟ ಆಡಬೇಕು. ಅವರು ಒಗ್ಗಟ್ಟಾಗಿ ಆಟ ಆಡಿದರು. ಅದುದರಿಂದ ಅವರು ಗೆಲುವನ್ನು ಪಡೆದರು. ಅವರಿಗೆಲ್ಲ ಸಂತೋಷವಾಯಿತು.


By,
Fathimath Arshiya
9B

# ***Cassia fistula***



***Indian laburnum is the symbol of the beauty and charm of kerala. Commonly we known as Kannikonna.***

***This tree grows all over our country.It grows height of about 10 metres The branches will be about a feet long 6-7 pairs of leaves can be seen on either side of the branch 40-50cm long and finger like fruits,hang from these branches.It is a magnificent sight to see the tree bloosom in Aprilwith only branches of flowers.***

***Easily evaporating oil is present in its roots and the bark of the tree.This tree is the symbol of godess. Skin diseases can be cured if the decoction made from the bark of this tree***

# ***TICKLE YOUR BRAIN***

***Ridles can make you laugh,and force yo think.Just go through the riddles given below to give your brain in a nice tickle.***

***1. What goes up when rain comes down?***

****  Umbrella***

***2. Why does a hen lay eggs?***

****  Because if she drops them they would break.***

***3. Why is April first very tired?***

****  After a long march of 31 days.***

***4. What is the silent part of a girl?***

****  The letter R***

***5. The alphabet you can drink?***

****  T(tea)***

***6. Make five less adding to it?***

****  Addthe roman numeral I(one)to V(five)and you get IV(four).***

***7. What animals drops from the clouds?***

****  The reindeer(rain,dear)***

***8. What starts with T,ends with T,and is full of T?***

****  Teapot.***

***9. Whhat 3 letters make a man of boy?***

****  Age.(a,g,e)***

***10. What is broken whenyou name it?***

****  Silence.***

***11. Spell mousetrap in 3 letters?***

****  C-a-t***

***12. Take ten from nineand leave only yourself?***

****  From the Roman Ix take away the X and I is left.***

***13. What do seven days of dieting do?***

****  Makes one weak(week).***

# ***<u>Friend</u>***

*A good friend*
*Can never buy in rent*
*Friends are not hearts calculation*
*They are heart solution*
*A good freind  scold like a father*
*Cares like a mother*
*Iritate like a sister*
*and teases like a brother*
*Friends are miracle*
*They always in our heart*
*And takes us into careful world*
*Don’t break friendship*
*After understanding*
*Don’t do friendship*
*Before understanding.*

*By: Elna christina*
*9B*

## ***KNOWLEDGE IS POWER***

*Wealth without work*
*Pleasure without conscience*
*Science without humanity*
*Knowledge without charecter*
*Politics without principle*
*Commerce without morality*
*Worship without sacrifice*

***But knowledge is the god mother of all discoveries,explorations and inventions.Mainly man gains knowledge through observations and experimentations at first man embarks upon a project just at random and the results are startlingly positive or negetive.***

***Knowledge is a dominent factor which helps man to activate victory power and position in life.***

***By,***
***Rithesh***
***9A***


By,
Fathimath Arshiya
9B


Thank
You